ಕುರಿಯಂತೆ ನನ್ನ ಮಾತಿನ ತಳಿರನ್ನು ನಾನೇ ಮೇಯುತ್ತ ಸಂತೃಪ್ತಿಯಿಂದ ಆಸೀನನಾದೆ. ನಂತರ ಎದ್ದ ಸಹಭಾಷಣಕಾರರು ನನ್ನನ್ನು ಅರೆಯಲು, ಕಟ್ಟಲು, ಬೀಸಲು, ಸೀಳಲು ಶುರುಮಾಡಿದರು. ಅದೊಂದು ದಕ್ಷವಧೆಯ ಪ್ರಸಂಗ. ಹಿಂದೆಂದೊ ಅವರ ಪುಸ್ತಕವನ್ನು ಟೀಕಿಸಿ ನಾನು ಬರೆದಿದ್ದೆನಂತೆ. ಅವರು 'ಅವನ ಬೆಂಡೆತ್ತುತ್ತೇನೆ ನೋಡಬನ್ನಿ' ಎಂದು ಅಭಿಮಾನಿಗಳನ್ನು ವ್ಯಾನಿನಲ್ಲಿ ಕರೆತಂದಿದ್ದರು. ವೀರಭದ್ರನು ದಕ್ಷನಿಗೆ ಹಾಕುವ ಪ್ರತಿ ಹೊಡೆತಕ್ಕೂ ಅಭಿಮಾನಿ ಗಣಂಗಳು ಕೇಕೆಹಾಕಿ ಪ್ರೋತಾಹಿಸಿದರು. ನಾನು ಇಷ್ಟುದೂರ ಬರಬೇಕಾಗಿತ್ತೇ ಕೋಲುಕೊಟ್ಟು ಬಡಿಸಿಕೊಳ್ಳುವುದಕ್ಕೆ?

ಭಾಷಣಕ್ಕೆ ಹೋದಾಗ ಸಹಿಸಲು ಅಸಾಧ್ಯವಾದ ಕಿರಿಕಿರಿ ಎಂದರೆ ಗಣ್ಯರನ್ನು ಕಾಯುವುದು. ಒಮ್ಮೆ ಕಾರ್ಯಕ್ರಮ ಉದ್ಘಾಟಿಸಬೇಕಿದ್ದ ಶಾಸಕರೊಬ್ಬರು ಹೊತ್ತಿಗೆ ಸರಿಯಾಗಿ ಬರಲಿಲ್ಲ. ಬೆಂಗಳೂರಿನಿಂದ ಬರುವಾಗ ಅವರ ಮತಕ್ಷೇತ್ರಕ್ಕೆ ಸೇರಿದ ಒಂದು ಊರಿನವರು ಸ್ಮಶಾನಭೂಮಿ ಮಂಜೂರು ಮಾಡಬೇಕೆಂದು ಕಾರನ್ನು ತಡೆದಿದ್ದರಂತೆ. ಅವರು ಬರುವ ತನಕ ಸ್ಥಳೀಯ ಗಾಯಕರು ಹಾಡುತ್ತಿದ್ದ ನಾಡಗೀತೆಗಳನ್ನು ಕೇಳಿಕೇಳಿ ನನ್ನಲ್ಲಿದ್ದ ನಾಡಪ್ರೇಮ ಸೋರಿ ಹೋಗಿತ್ತು. ಗಾಯಕರು 'ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ' ಹಾಡುವಾಗ ಬಸವಣ್ಣ ಇದನ್ನು ನನಗಾಗೇ ರಚಿಸಿದ ನನ್ನಾತ್ಮದ ದನಿಯೆನಿಸಿತು. ಸಭೆಯನ್ನು ಕಾಯಿಸಿದ ಬಗ್ಗೆ ಮಾನ್ಯ ಶಾಸಕರ ಮೊಗದಲ್ಲಿ ಎಳ್ಳುಕಾಳಿನಷ್ಟೂ ಪಶ್ಚಾತ್ತಾಪ ಇರಲಿಲ್ಲ. ಮಾತ್ರವಲ್ಲ, ನಾನು ಭಾಷಣ ಮಾಡುವಾಗ, 'ಅದೇನು ಮಾತಾಡ್ತಾರ್ರೀ ಈ ಮಾಸ್ತರ. ತಿಳೀವಲ್ಲದು. ಝುಟ್‌ಪಟ್ ಮುಗಸಕೆ ಹೇಳ್ರೀ. ನನಗ ಇನ್ನೊಂದು ಫಂಕ್ಷನ್ ಅದ' ಎಂದು ನನ್ನ ಕರ್ಣಕ್ಕೆ ತಲುಪುವಂತೆ ಕಾರ್ಯಕರ್ತರಿಗೆ ಸೂಚನೆಯನ್ನೂ ಕೊಟ್ಟರು.

ಭಾಷಣಕ್ಕೆ ಹೋಗಿ ನೀರುನಿಡಿ ಇಲ್ಲದೆ ಬೀದಿಗೆ ಬಿದ್ದ ಅನುಭವವನ್ನೂ ಹೇಳಿಕೊಳ್ಳಬೇಕು. ಇದನ್ನು ದಯಪಾಲಿಸಿದವರು ಒಬ್ಬ ಹೊಸದಾಗಿ ಕಟ್ಟಿದ ಆಶ್ರಮದ ಸ್ವಘೋಷಿತ ಗುರುಗಳು. ಅವರು ನನ್ನನ್ನು ಸದಾ ಕರೆಯುತ್ತಿದ್ದರು. ಹೋಗಲಾಗಿರಲಿಲ್ಲ. ಅವರೊಂದು ಸಲ 'ಮತೀಯ ಸೌಹಾರ್ದದ ಬಗ್ಗೆ ಭಾಳ ಬರೀತೀರಿ. ಅದಕ್ಕಾಗಿ ಕಟ್ಟಿದ ನಮ್ಮ ಆಶ್ರಮಕ್ಕೆ ಆಗಮಿಸಲು ತಮಗೆ ಸಾಧ್ಯವಾಗುತ್ತಿಲ್ಲ. ಸರ್ಕಾರದವರಂತೆ ಟೀಯೆಡೀಯೆ ಕೊಡಲಾರೆವು, ಏನು ಮಾಡಲಿ ಬಡವರಯ್ಯಾ' ಇತ್ಯಾದಿ ಒಕ್ಕಣೆಯಿಟ್ಟು ಪತ್ರ ಬರೆದರು. ನಾಟಲಿ ಎಂದೇ ಎಸೆದ ಬಾಣವದು. ಹೋಗದಿದ್ದರೆ ಮಾನಗೇಡು ಎಂದು ಹೊರಟೆ. ಬಸ್ ಅನುಕೂಲವಿಲ್ಲದ ಆ ಹಳ್ಳಿಗೆ ಹತ್ತಾಳ ಜಾಗದಲ್ಲಿ ಇಪ್ಪತ್ತಾಳು ತುರುಕುವ ಟಂಟಂನಲ್ಲಿ ಕೂತು ಹೋದೆ. ಅದು ನನ್ನನ್ನು ಸೊಪ್ಪುಮಾಡಿ ತಂದು ಒಗೆಯಿತು. ಆಶ್ರಮದೊಳಕ್ಕೆ ಹೋದಾಗ, ಮದುಮಗನನ್ನು ಆರತಕ್ಷತೆಗೆ ಮುಂಚೆ ಗೆಳೆಯರೆಲ್ಲ ಸೇರಿ ಸಿಂಗರಿಸುವಂತೆ ಶಿಷ್ಯರು ಅಮರಿಕೊಂಡು ಗುರುಗಳಿಗೆ ಪೇಟಸುತ್ತುವುದು ಇತ್ಯಾದಿ ಮಾಡುತ್ತಿದ್ದರು. ನಾನು ನಮಸ್ಕರಿಸಿ ಪರಿಚಯ ಹೇಳಿಕೊಂಡೆ. ಕಟ್ಟಿದ್ದ ಪೇಟವನ್ನು ನಿಲುಗನ್ನಡಿಯಲ್ಲಿ ನೋಡಿಕೊಳ್ಳುತ್ತ ಗುರುಗಳು, 'ಈಗ ಬಂದ್ರಿ? ಸಂತೋಷ. ಸಂತೋಷ. ಮಿನಿಸ್ಟರು ಹಾದಿಯೊಳಗದಾರ. ಪ್ರೋಗ್ರಾಂ ಅರ್ಧತಾಸಿನೊಳಗ ಶುರು ಆಕ್ಕತಿ. ಅಲ್ಲಿಮಟ ಸ್ಟೇಜಿನ ಮುಂದ ಕೂಡ್ರಿ. ಮ್ಯಾಲ ಕರೀತೀವಿ. ಬ್ಯಾಸರಾದರ ಹಂಗ ಊರೊಳಗ ಅಡ್ಡಾಡಕೊಂಡು ಬರ್ರಿ' ಎಂದರು. ಕರೆಯದೆ ಹೋದವನಿಗೆ ಏನೆಲ್ಲ ಶಿಕ್ಷೆಕೊಡಬೇಕು ಎಂದು ಸರ್ವಜ್ಞ ಅಜ್ಞಾನದಿಂದ ವಚನ ಬರೆದ. ಕರೆಸಿಕೊಂಡು ಹೋದವರೂ ಹೊಡೆಸಿಕೊಳ್ಳುವುದು ಅವನಿಗೆ ಗೊತ್ತಿರಲಿಕ್ಕಿಲ್ಲ. ಛೇ! ಇಲ್ಲಿ ಹನಿ ನೀರೂ ಕುಡಿಯಬಾರದು ಅನಿಸಿತು. ಆದರೆ ಜನ ನನ್ನವರು.